# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು- 560113**

**ಸಂಖ್ಯೆ:ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ 12/2020-21** **ದಿನಾಂಕ: 19.03.2021**

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಐ12(5)ಪಿಆರ್/35/ 2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:-19.03.2021 ರಂದು ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಹಾಗೂ ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ರವರ ಆದೇಶದ ಮೇರೆಗೆ ಈ ಮಾಹೆಯ ಸಭೆಯಲ್ಲಿ 2021-22 ನೇ ಸಾಲಿನಲ್ಲಿ ಮಂಡಿಸುವ ಆಯವ್ಯಯಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕರಿಂದ ಸಲಹೆಗಳನ್ನು ಪಡೆಯುವ ಸಲುವಾಗಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

ಉಪಸ್ಥಿತರು:

| ಕ್ರಸಂ | ಹೆಸರು | ಹುದ್ದೆ | ಮೊಬೈಲ್ ಸಂಖ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ಸಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 3 | ಶ್ರೀ.ಚಂದ್ರಶೇಖರ್.ಎ.ಜಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೊರಮಾವು) | 9844587466 |
| 4 | ಶ್ರೀ. ಸಂಜಯ್ ಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು | 9742919411 |
| 5 | ಶ್ರೀ.ರಮೇಶ್ | ಕಿರಿಯ ಅಭಿಯಂತರರು ವಾರ್ಡ್-25 | 9739838297 |
| 6 | ಶ್ರೀ.ತಿರುಮಲ ಪ್ರಸಾದ್ | BWSSB (PMC) | |
| 7 | ಶ್ರೀ. ಆನಂದ್ | AEE (BWSSB) | |
| 8 | ಶ್ರೀ.ಆದರ್ಶ.ಡಿ.ಕೆ. | AE (BWSSB) | 96324225: |
| 9 | ಶ್ರೀ.ಶ್ರೀನಿಧಿ | AEE (SWM) | 94806835: |
| 10 | ಶ್ರೀ.ಕೋದಂಡರಾಮ | ಸ್ಟ್ರೀಟ್ ಲೈಟ್ ಗುತ್ತಿಗೆದಾರರು | |
| 11 | ಶ್ರೀ.ಟೋನಿ ಸ್ವಾಮಿ, ಸಾಯಿ ಬಡಾವಣೆ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | | |
| 12 | ಶ್ರೀ.ಅರುಣ್ ಸ್ಟೀವನ್, ಎಸ್ಟಾರ್ ಎನ್‌ಕ್ಲೇವ್ ವೆಲ್‌ಫೇರ್ ಅಸೋಸಿಯೇಷನ್ | | |
| 13 | ಶ್ರೀ.ಆರುಗಂ, ದಾಮೋದರನ್ ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | | |
| 14 | ಶ್ರೀ.ಪ್ರದೀಪ್ ಹೊರಮಾವು ಗ್ರಾಮ | | |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು. ನೋಡಲ್ ಅಧಿಕಾರಿರವರು ಸಭೆಯಲ್ಲಿ ಈ ಹಿಂದೆ ಸಭೆಗೆ ಗೈರುಹಾಜರಾಗಿರುವ ಅಧಿಕಾರಿಗಳಾದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಿ.ಎ ಹಾಗೂ ಬೆಸ್ಕಾಂ, ರಸ್ತೆ ಮೂಲಭೂತ ಸೌಕರ್ಯ, ಆರಕ್ಷಕ ನಿರೀಕ್ಷಕರು ಸಂಚಾರಿ ವಿಭಾಗ, ಮತ್ತು ಆರಕ್ಷಕ ನಿರೀಕ್ಷಕರು ರವರುಗಳೆಲ್ಲಾ ಗೈರು ಹಾಜರಾಗಿರುವ ಅಧಿಕಾರಿಗಳಿಗೆ ನೋಟೀಸ್ ಜಾರಿಮಾಡಿರುವುದಾಗಿ ಸಭೆಯಲ್ಲಿ ಸೂಚಿಸಿರುತ್ತಾರೆ. ಹಾಗೂ ಪ್ರಸ್ತುತ 2020-21 ನೇ ಸಾಲಿಗೆ ಮಾರ್ಚ್ ತಿಂಗಳು ಕೊನೆಗೊಳ್ಳಲಿದ್ದು, ಈ ವಾರ್ಡ್‌ನ ಅಸೋಸಿಯೇಷನ್ ಹಾಗೂ ಸ್ಥಳೀಯ ನಿವಾಸಿಗಳಿಗೆ ಕಂದಾಯ ಪಾವತಿಸುವ ಬಗ್ಗೆ ಅರಿವು ಮೂಡಿಸಿದರು.

**ಮು.ಪು.ನೋ**

**ಶ್ರೀ.ಸಂಜಯ್ ಆರೋಗ್ಯ ಪರಿವೀಕ್ಷಕರು** ರವರು ಸಭೆಯಲ್ಲಿ ಮಾತನಾಡುತ್ತಾ, ಬಿಬಿಎಂಪಿ ವತಿಯಿಂದ ಕೋವಿಡ್ -19 ರ ನಿಯಂತ್ರಣಕ್ಕೆ ಸಾರ್ವಜನಿಕರಿಗೆ ಕೋವಿಡ್ -19 ಚುಚ್ಚುಮದ್ದನ್ನು ಹಾಕಿಸುತ್ತಿರುವುದರಿಂದ ಸಭೆಗೆ ಹಾಜರಿದ್ದ ಸಾರ್ವಜನಿಕರು, ಹಾಗೂ ಅಸೋಸಿಯೇಷನ್ ರವರಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸಿದರು ಹಾಗೂ ಬಿಬಿಎಂಪಿ ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಪೌರಕಾರ್ಮಿಕರಿಗೆ ಪ್ರತ್ಯೇಕ ಡ್ರೆಸಿಂಗ್‌ರೂಂ ನಿರ್ಮಿಸಿಕೊಡಬೇಕೆಂದು ಸಭೆಯಲ್ಲಿ ಸೂಚಿಸಿದರು.

**ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-**

**ಶ್ರೀ.ಟೋನಿ ಸ್ವಾಮಿ, ಸಾಯಿ ಬಡಾವಣ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್** – ರವರು ಮಾತನಾಡಿ ಸಾಯಿ ಬಡಾವಣೆ ಮುಖ್ಯರಸ್ತೆ, 5ನೇ ಮತ್ತು 6ನೇ ಅಡ್ಡರಸ್ತೆಗಳಲ್ಲಿ ಬೋರ್‌ವೆಲ್ ಪೈಪ್ ಲೈನ್ ಒಡೆದು ಹೋಗಿದ್ದು, ಬೇಸಿಗೆ ಕಾಲ ಪ್ರಾರಂಭವಾಗಿದ್ದು, ನೀರಿನ ಅಭಾವ ಇರುವುದರಿಂದ ತುರ್ತಾಗಿ ಹೊಸದಾಗಿ ನೀರು ಸಂಪರ್ಕ ಹಾಗೂ ಕಾವೇರಿ ನೀರು ಸಂಪರ್ಕ ಕಲ್ಪಿಸಿಕೊಡಬೇಕೆಂದು, ಮತ್ತು ಸಾಯಿಬಾಬ ಬಡಾವಣೆಗೆ ಹೊಂದಿಕೊಂಡಂತಿರುವ ಅರ್ಕಾವತಿ ಬಡಾವಣೆಯಲ್ಲಿ ಬಿ.ಡಿ.ಎ ವತಿಯಿಂದ ಮಳೆನೀರು ಹರಿಯಲು ಮಳೆನೀರು ಚರಂಡಿಯನ್ನು ಇದುವರೆವಿಗೂ ರೀಗ್ರೇಡ್ ಮಾಡದಿರುವ ಕುರಿತು ಮತ್ತು ರಾಜಕಾಲುವೆ ಗೋಡೆಯನ್ನು ನಿರ್ಮಿಸಬೇಕೆಂದು ಕೋರಿಕೊಂಡಿರುತ್ತಾರೆ ಮತ್ತು ಮತ್ತು ಬೀದಿಗಳಿಗೆ ಅಳವಡಿಸಿರುವ ದೀಪಗಳ ಬದಲಾಗಿ ಎಲ್.ಇ.ಡಿ ಲೈಟ್‌ಗಳನ್ನು ಅಳವಡಿಸಲು ಹಾಗೂ ಕಸ ವಿಲೇವಾರಿ ವಿಳಂಬಕ್ಕೆ ಅವಕಾಶ ಕೊಡದೆ 2-3 ದಿನಗಳ ಒಳಗಾಗಿ ಕಸ ವಿಲೇವಾರಿ ಮಾಡಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಿ.ಎ/ಬಿ.ಡಬ್ಲ್ಯೂ.ಎಸ್.ಎಸ್.ಬಿ/ಹೊರಮಾವು ರವರು, ಹಾಗೂ ಹಿರಿ ಆರೋಗ್ಯ ಪರಿವೀಕ್ಷಕರು ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ಅರುಳ್ ಸ್ಟೀವನ್, ಎಸ್ಸಾರ ಎನ್‌ಕ್ಲೇವ್ ವೆಲ್‌ಫೇರ್ ಅಸೋಸಿಯೇಷನ್:-** ರವರು ಮಾತನಾಡಿ ಹೊರಮಾವು ಅಗರ ಎಸ್ಸಾರ ಎನ್‌ಕ್ಲೇವ್ ಅಪಾರ್ಟ್‌ಮೆಂಟ್ ಸುತ್ತ-ಮುತ್ತ ಬಿಬಿಎಂಪಿ ವತಿಯಿಂದ ಯು.ಜಿ.ಡಿ., ರಸ್ತೆ, ನೀರು, ಎಲ್ಲಾ ಸೌಲಭ್ಯಗಳನ್ನು ಒದಗಿಸಿರುವುದಕ್ಕೆ ಸಭೆಯಲ್ಲಿ ಧನ್ಯವಾದಗಳನ್ನು ವ್ಯಕ್ತಪಡಿಸಿದರು. ಹಾಗೂ ಬೇಸಿಗೆಕಾಲ ಪ್ರಾರಂಭವಾಗಿರುವುದರಿಂದ ಹೆಚ್ಚುವರಿಯಾಗಿ ಇನ್ನೊಂದು ಬೋರ್‌ವೆಲ್ ಅಳವಡಿಸಿಕೊಡಬೇಕೆಂದು, ಮತ್ತು ಕಸವಿಲೇವಾರಿ ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ ಸದರಿ ಅಸೋಸಿಯೇಷನ್ ವತಿಯಿಂದ ಸ್ವತಃ ಅವರೇ ಕಸ ವಿಲೇವಾರಿ ಮಾಡಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಸಾರ್ವಜನಿಕರಿಗೆ ಕಸ ಎಲ್ಲೆಂದರಲ್ಲಿ ಕಸ ಹಾಕುತ್ತಿರುವವರಿಗೆ ಜರೂರಾಗಿ ದಂಡ ವಿಧಿಸಬೇಕೆಂದು ಕೋರಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-25, ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು, ರವರಿಗೆ ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

**ಶ್ರೀ.ಆರ್ಮುಗಂ, ದಾಮೋದರನ್ ಸರ್.ಎಂ.ವಿ ನಗರ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ರವರು ಮಾತನಾಡಿ ಸರ್.ಎಂ.ವಿ ನಗರ 2ನೇ ಹಂತ, 2ನೇ ಮುಖ್ಯ ರಸ್ತೆಯಲ್ಲಿ ವಿದ್ಯುತ್ ಕಂಬ ರಸ್ತೆಯಮಧ್ಯದಲ್ಲಿ ಇರುತ್ತದೆ. ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ವಿದ್ಯುತ್ ಕಂಬವನ್ನು ರಸ್ತೆ ಬದಿ ಸ್ಥಳಾಂತರಿಸಬೇಕೆಂದು ಕೋರಿರುತ್ತಾರೆ. ಮತ್ತು 1ನೇ ಹಂತ . 4 ಮತ್ತು 5ನೇ ಮುಖ್ಯರಸ್ತೆಗೆ ಸಂಪರ್ಕಿಸುವ ಅಡ್ಡರಸ್ತೆಗಳಿಗೆ ನಾಮಫಲಕಗಳನ್ನು ಅಳವಡಿಸಿಕೊಡಬೇಕೆಂದು ಕೋರಿರುತ್ತಾರೆ. ಸರ್.ಎಂ.ವಿ ನಗರ 1ನೇ ಹಂತದ 16 ರಿಂದ 20ನೇ ಅಡ್ಡರಸ್ತೆಗಳಲ್ಲಿನ ನಿವಾಸಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದ್ದು, ಇದರ ಬಗ್ಗೆ ಕ್ರಮವಹಿಸಬೇಕೆಂದು ಕೋರಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-25 ಮತ್ತು ಸಹಾಕಯ ಅಭಿಯಂತರರು ಬೆಸ್ಕಾಂ ರವರಿಗೆ ಈ ಕುರಿತು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

**ಶ್ರೀ.ಪ್ರದೀಪ್ ಹೊರಮಾವು ಗ್ರಾಮ** – ರವರು ಮಾತನಾಡಿ ಹೊರಮಾವು ಗ್ರಾಮದಲ್ಲಿ ಹಾಲಿ ಸ್ಮಶಾನವಿದ್ದು, ಈ ಸ್ಮಶಾನವು ಮುಖ್ಯರಸ್ತೆಯಿಂದ ತುಂಬಾ ತಳಭಾಗದಲ್ಲಿದ್ದು, ಮಳೆಗಾಲದಲ್ಲಿ ನೀರು ಸ್ಮಶಾನಕ್ಕೆ ನುಗ್ಗುತ್ತಿದ್ದು, ಇದರಿಂದ ತುಂಬಾ ತೊಂದರೆಯಾಗುತ್ತಿದ್ದು, ಸದರಿ ರಸ್ತೆಯನ್ನು ಮುಖ್ಯರಸ್ತೆ ಮಟ್ಟಕ್ಕೆ ಎತ್ತರ ಮಾಡಿ ನೀರು ಸ್ಮಶಾನ ಕಡೆಯಿಂದ ಮುಖ್ಯರಸ್ತೆವರೆಗೆ ಹರಿಯಲು ಅನುವು ಮಾಡಿ ಕಾಂಕ್ರೀಟ್ ರಸ್ತೆಯನ್ನು ತುರ್ತಾಗಿ ನಿರ್ಮಾಣ ಮಾಡಲು ಮತ್ತು ಹೊರಮಾವು ಗ್ರಾಮದಲ್ಲಿ ಓವರ್‌ಹೆಡ್ ಟ್ಯಾಂಕ್ ಪಕ್ಕದ ರಸ್ತೆಯಲ್ಲಿ ಆರ್.ಸಿ.ಸಿ ಚರಂಡಿ ನಿರ್ಮಿಸಲು ಮತ್ತು ಹೊರಮಾವು ಉಪ-ವಿಭಾಗ ಕಚೇರಿ ಆವರಣದಲ್ಲಿ ಈ ಹಿಂದೆ ಪೋಸ್ಟ್ ಆಫೀಸ್ ಕಛೇರಿಯಿದ್ದು, ಆ ಅಂಚೆ ಕಚೇರಿಯು ಸ್ಥಳಾಂತರಗೊಂಡಿದ್ದು, ಈ ಖಾಲಿ ಇರುವ ಕಟ್ಟಡದಲ್ಲಿ ಬೆಂಗಳೂರು ಒನ್ ಸೆಂಟರ್‌ನ್ನು ತೆರೆದರೆ ಈ ಸ್ಥಳವು ಕೇಂದ್ರ ಸ್ಥಳವಾಗಿರುವುದರಿಂದ ಎಲ್ಲಾ ಸಾರ್ವಜನಿಕರಿಗೂ ಅನುಕೂಲವಾಗಲಿದ್ದು, ತುರ್ತಾಗಿ ಬೆಂಗಳೂರು ಒನ್ ಸೆಂಟರ್ ತೆರೆಯಲು ಕ್ರಮ ವಹಿಸಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾಗೂ ಸಹಾಯಕ ಅಭಿಯಂತರರು, ಹೊರಮಾವು ರವರು ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.

ಮು.ಪು.ನೋ

ಹೊರಮಾವು ಉಪ-ವಿಭಾಗಕ್ಕೆ ಸಂಬಂಧಿಸಿದಂತೆ ಬೃಹತ್ ರಸ್ತೆಗಳ ವಿಭಾಗ, ಬಾಣಸವಾಡಿ, ನಾಗವಾರ, ಆರಕ್ಷಕ ...ಂಧಿಗಳು- ರಾಮಮೂರ್ತಿನಗರ, ಹೆಣ್ಣೂರು ಪೋಲೀಸ್‌ಠಾಣೆ, ಆರಕ್ಷಕ ಸಿಬ್ಬಂಧಿಗಳು ಸಂಚಾರ ವಿಭಾಗ-ಕೆ.ಆರ್.ಪುರ, ...ಮಮೂರ್ತಿನಗರ, ಬಾಣಸವಾಡಿ ಹಾಗೂ ಸಹಾಯಕ ಅಭಿಯಂತರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರಿಗೆ ಈ ದಿನ ...ೆ ಹಾಜರಾಗಲು ಸೂಚಿಸಿದ್ದರೂ ಸಹ ಸದರಿ ರವರು ಗೈರುಹಾಜರಾಗಿದ್ದು, ಈ ಕುರಿತು ಸಾರ್ವಜನಿಕರು ಸಭೆಗೆ ...ಬಂಗದ ಅಧಿಕಾರಿಗಳ ವಿರುದ್ಧ ಅಸಮಧಾನ ವ್ಯಕ್ತಪಡಿಸಿ ಮುಂದಿನ ಸಭೆಯಲ್ಲಿ ಎಲ್ಲರೂ ಹಾಜರಾಗಲೂ ಕ್ರಮಕೈಗೊಳ್ಳಲು ...ರಿಕೊಂಡಿದ್ದು, ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ...ು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ...ವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ...ುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಿರಿಯ ಅಭಿಯಂತರರು
ಹೊರಮಾವು ವಾರ್ಡ್‌ನಂ.25
ಬಿ.ಬಿ.ಎಂ.ಪಿ